-ಆ) ನ್ಯಾಯಾಲಯವು ದೂರನ್ನು ನೊಂದಾಯಿಸಿಕೊಂಡು ತನಿಖೆಗಾಗಿ ಆದೇಶ ನೀಡಿರುತ್ತದೆ.

ಆ) ಹೌದು.

ಇ) ಪ್ರಕರಣವು ಸಿಸಿಬಿಯಲ್ಲಿ ಇನ್ನು ತನಿಖಾ ಹಂತದಲ್ಲಿದ್ದು, ತನಿಖೆ ಪೂರ್ಣ ಪೂರೈಸಿದ ನಂತರ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು.

ನೀರಾವರಿ ಇಲಾಖೆಯು ಗುತ್ತಿಗೆದಾರರಿಗೆ ನೀಡಬೇಕಾದ ಬಾಕಿ ಹಣ.

3059(3768)

ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ. ನೀರಾವರಿ ಇಲಾಖೆಯ ಆಯವ್ಯಯದ ಪ್ರಸ್ತಾವನೆಯಲ್ಲಿ ಗುತ್ತಿಗೆದಾರರಿಗೆ ಬಾಕಿಯಿರುವ ಮೊತ್ತವನ್ನು ಸೇರಿಸಲಾಗಿದೆಯೇ?

ಆ. ಗುತ್ತಿಗೆದಾರರ ಬಾಕಿಯನ್ನು ಬಾಕಿ ಇರುವ ಅವಧಿಯ ಆದ್ಯತೆಯ ಮೇರೆಗೆ ಕಟ್ಟುನಿಟ್ಟಾಗಿ ಇತ್ಯರ್ಥ ಮಾಡುತ್ತಿದೆಯೇ?

ಇ. 1999-2000 ಆರ್ಥಿಕ ವರ್ಷದಲ್ಲಿ ಇತ್ಯರ್ಥವಾದ ಗುತ್ತಿಗೆದಾರರ ಬಾಕಿ ಎಷ್ಟು? (ಪವರ ನೀಡುವುದು)

ಶ್ರೀ ಎಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು):

ಅ. ಸೇರಿಸಲಾಗಿದೆ.

ಆ. ನಿಯಮಾನುಸಾರ ಮತ್ತು ಜೇಷ್ಯತೆಯನುಸಾರ ಪಾವತಿಸುವಂತೆ ನಿರ್ದೇಶನ ನೀಡಲಾಗಿದೆ.

ಇ. 1999-2000 ಆರ್ಥಿಕ ವರ್ಷದಲ್ಲಿ ರೂ.35347.34 ಲಕ್ಷಗಳ ಬಿಲ್ಲುಗಳನ್ನು ಇತ್ಯರ್ಥ ಮಾಡಲಾಗಿದೆ.

ವಲಯ		(ರೂ. ಲಕ್ಷಗಳಲ್ಲಿ)
1.	ನೀರಾವರಿ ಕೇಂದ್ರ ವಲಯ, ಮುನಿರಾಬಾದ್	5325.91
2.	ನೀರಾವರಿ ಯೋಜನಾ ವಲಯ, ಗುಲ್ಬರ್ಗಾ	5573.58
3.	ತುಂಗಾ ಮೇಲ್ಪಂಡೆ ಯೋಜನಾ ವಲಯ, ಶಿವಮೊಗ್ಗ	1647.42
4.	ನೀರಾವರಿ (ದಕ್ಷಿಣ) ವಲಯ, ಮೈಸೂರು	15406.27
5.	ಹೇಮಾವತಿ ಯೋಜನಾ ವಲಯ, ಗೊರೂರು	3620.92
6.	ಹೇಮಾವತಿ ನಾಲಾ ವಲಯ, ತುಮಕೂರು	3773.24
	ಒಟ್ಟು:	35347.34

ದೊಡ್ಡಬಳ್ಳಾಪುರ ತಾಲ್ಲೂಕು ಗುಂಡಂಗೆರೆ ಬಳಿ ವಿದ್ಯುತ್ ಕೆ.ವಿ. ಸ್ಟೇಷನ್ ನಿರ್ಮಾಣ.

3060(3382)

ಶ್ರೀ ವಿ.ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ತಾಲ್ಲೂಕು ಗುಂಡಂಗೆರೆ ಬಳಿ ವಿದ್ಯುತ್ ಕೆ.ವಿ. ಸ್ಟೇಷನ್ ಮಂಜೂರಾತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಕೆ.ವಿ.ಸ್ಟೇಷನ್ ಮಂಜೂರಾಗಿದೆ ಹಾಗೂ ಯಾವ ಹಂತದಲ್ಲಿದೆ?

ಇ) ಸ್ಟೇಷನ್ ಪ್ರಾರಂಭಿಸುವುದು ಯಾವಾಗ? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು):